**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು.**

**<u>ಸಿ.ಸಿ.ನಂ. 836: 2023</u>**

**ದಿನಾಂಕಃ 11.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು ಃ | ಅಣ್ಣಪ್ಪನಾಯ್ಕ | ಚಾಸಾ-4, ಪ್ರಾ.ಸ.-4 |
| ತಂದೆಯ ಹೆಸರು ಃ | ಗಂಗಾನಾಯ್ಕ | |
| ವಯಸ್ಸು ಃ | 34 ವರ್ಷ | |
| ಉದ್ಯೋಗ ಃ | ಬಾಣಸಿಗ | |
| ವಾಸ ಃ | ಕೆ ಬಿದರೆ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>

ದಿಃ 14.10.2022 ರಂದು ನಾನು ನನ್ನ ಅತ್ತೆ ಮನೆಗೆ ಆರಾಧನೆಗೆ ಹೋಗಿದ್ದೆ. ಅಂದಾಜು 3.30 ರ ಸಮಯದಲ್ಲಿ ನನ್ನ ಅತ್ತೆಗೆ ಯಾರೋ ಕರೆ ಮಾಡಿ ಚಾಸಾ-2 ರವರಿಗೆ ಅಪಘಾತ ಆಗಿದೆ ಬೇಗ ಬನ್ನಿ ಎಂದು ತಿಳಿಸಿದರು. ಸದರಿ ವಿಷಯ ನನ್ನ ಅತ್ತೆ ನನಗೆ ತಿಳಿಸಿದರು. ಆಗ ನಾನು ಕಡೂರಿನ ಆಸ್ಪತ್ರೆಗೆ ಹೋದೆ ಅಲ್ಲಿ ಚಾಸಾ-2 ರವರು ಇದ್ದರು. ವೈದ್ಯರು ಇಲ್ಲಿ ಆಗುವುದಿಲ್ಲ ಎಂದು ಹೇಳಿದ್ದಕ್ಕೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕರೆದುಕೊಂಡು ಹೋದೆ ನಂತರ ಅಲ್ಲಿಂದ ಮಂಗಳೂರಿನ ವೆನ್ ಲಾಕ್ ಆಸ್ಪತ್ರೆಗೆ ಕರೆದುಕೊಂಡು ಹೋದೆ. ಆ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

<u>ಪಾಟೀಸವಾಲುಃ ಮಾನ್ಯ ಸಸಅ. ರವರಿಂದ ಃ</u>

ಅತ್ತೆ ಮನೆಯಲ್ಲಿ ಇದ್ದ ಆರಾಧನೆಗೆ ಚಾಸಾ-1 ಮತ್ತು 2 ವಸ್ತುಗಳನ್ನು ಖರೀದಿಸಿ ಆಟೋದಲ್ಲಿ ತುಂಬಿಕೊಂಡು ಬರುತ್ತಿದ್ದಾಗ ಮಧ್ಯಾಹ್ನ 3.25 ಕ್ಕೆ ಕಡೂರಿನ ದೀಕ್ಷಾ ಶಾಲೆಯ ಮುಂಭಾಗದ ರಸ್ತೆಯಲ್ಲಿ ಊರಿಗೆ ವಾಪಸ್ಸು ಹೋಗುತ್ತಿದ್ದಾಗ ಬಾಣಾವರ ಕಡೆಯಿಂದ ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕನು ಅತೀವೇಗ ಮತ್ತು ಅಜಾಗರೂಕತೆಯಿಂದ ಬಂದು ಬೈಕಿಗೆ ಡಿಕ್ಕಿಪಡಿಸಿದರು ಎಂದರೆ ಸರಿಯಲ್ಲ. ಸದರಿ ವಿಷಯವನ್ನು ನನಗೆ ಚಾಸಾ-1 ಮತ್ತು 2 ತಿಳಿಸಿದರು ಎಂದರೆ ಸರಿಯಲ್ಲ.

<u>ಪಾಟೀಸವಾಲುಃ ಶ್ರೀ ಸಿ ವಿ ಎಸ್ ವಕೀಲರಿಂದ ಃ</u>

ನಮಗೆ ಕರೆ ಬಂದಾಗ ಆಸ್ಪತ್ರೆಗೆ ನಾನು ಮತ್ತು ನನ್ನ ಅತ್ತೆ ಚಾಸಾ-3 ಬಂದಿರುತ್ತೇವೆ. ನಾನು ಅಪಘಾತವನ್ನು ನೋಡಿರುವುದಿಲ್ಲ ಆ ಬಗ್ಗೆ ಮಾಹಿತಿ ಇರುವುದಿಲ್ಲ. ಅತ್ತೆ ಮನೆಯಲ್ಲಿ ಆರಾಧನೆ ಇದ್ದುದರಿಂದ ಚಾಸಾ-1 ಮತ್ತು 2 ರವರು ಕುರಿ, ಕೋಳಿ ಮತ್ತು ಇತರೇ ವಸ್ತುಗಳನ್ನು ತುಂಬಿಕೊಂಡು ಊರಿಗೆ ಬರುತ್ತಿದ್ದರು ಎಂದರೆ ಸರಿ. ಚಾಸಾ-1 ರವರೇ ಕಡೂರಿಗೆ ವಸ್ತುಗಳನ್ನು ಖರೀದಿಸಲು ಬಂದಿದ್ದರು

ಎಂದರೆ ಸರಿ. ಚಾಸಾ-1 ರವರು ಚಲಾಯಿಸುತ್ತಿದ್ದ ಆಟೋ ಹಿಂಭಾಗ ಜಖಂಗೊಂಡಿತ್ತು ಅದೇ ರೀತಿ ಬೈಕ್ ಮುಂಭಾಗ ಸಹ ಜಖಂಗೊಂಡಿತ್ತು. ಚಾಸಾ-2 ರವರನ್ನು ಆಸ್ಪತ್ರೆಗೆ ಯಾರು ಸೇರಿಸಿದರು ಎಂದು ನನಗೆ ತಿಳಿದಿರುವುದಿಲ್ಲ. ಎದುರಿನಿಂದ ಬರುತ್ತಿದ್ದ ಕೆ ಎಸ್ ಆರ್ ಟಿ ಸಿ ಬಸ್ಸು ಚಾಸಾ-2 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದು ಸೇರಿಸಿದರು ಎಂದರೆ ಸರಿಯಲ್ಲ. ಆಗ ಅಪಘಾತವನ್ನು ನೋಡಿ ಸಹಾಯ ಮಾಡಲು ಬಂದ ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕನ ವಿರುದ್ದವೇ ದೂರು ನೀಡಲಾಗಿದೆ ಎಂದರೆ ಸರಿ. ಚಾಸಾ-2 ರವರು ಆಸ್ಪತ್ರೆಯಲ್ಲಿ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಬೈಕ್ ಆಟೋಗೆ ಹಿಂಬದಿಯಿಂದ ಡಿಕ್ಕಿಪಡಿಸಿದೆ ಎಂದರೆ ಸರಿ. ಬೈಕ್ ಮತ್ತು ಆಟೋ ನಡುವೆ ಅಪಘಾತವಾಗಿದೆ ಹಾಗೂ ಬಸ್ ಅಪಘಾತಪಡಿಸಿಲ್ಲ ಎಂದರೆ ಸರಿ. ಆದರೆ ಬಸ್ಸಿನ ವಿರುದ್ದ ದೂರು ನೀಡಲಾಗಿದೆ ಎಂದರೆ ಸರಿ. ಪೋಲಿಸರು ನನ್ನ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಪಡೆದಿರುತ್ತಾರೆ.

**ಮರು ವಿಚಾರಣೆ ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ ಎ ಒ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದಃನ್ಯಾಃದಂ.,ರವರು, ಕಡೂರು.